| OS | 57/2016 | ಡಿ.ಡಬ್ಲ್ಯೂ: 1 |
|---|---|---|

ಇಂದು ದಿ: 03.02.2026. ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು: ವಾದಿ ಪರ ವಕೀಲರಿಂದ:

ನನ್ನ ಊರು ಶ್ರೀರಾಂಪುರ. ಪ್ರಮಾಣ ಪತ್ರದಲ್ಲಿ ಹೊಸೂರು ಎಂದು ತೋರೀಸಿರುವುದು ಸುಳ್ಳು. ಹೊಸೂರು ಗ್ರಾಮದಿಂದ ನನ್ನನ್ನು ಕರೆದುಕೊಂಡು ಬಂದು ಸಾಕು ಮಗನಾಗಿ ನೋಡಿಕೊಂಡಿದ್ದಾರೆ ಎಂದು ಹೇಳಿರುವುದು ನಿಜ. ನನ್ನ ತಂದೆ ತಾಯಿಗೆ 5 ಜನ ಮಕ್ಕಳು. ಅವರೆಲ್ಲ ಹೊಸೂರು ಗ್ರಾಮದಲ್ಲಿ ಇದ್ದಾರೆ. ನನಗೆ 8-9 ವರ್ಷ ಆದ ನಂತರ ಚಿಕ್ಕ ಮಾದಯ್ಯ ಕರೆದುಕೊಂಡು ಬಂದು ಸಾಕುತ್ತಿದ್ದರು. ನನ್ನ ಆಧಾರ ಗುರುತಿನ ಚೀಟಿ, ರೇಷನ್ ಕಾರ್ಡು ಹೊಸೂರಿನಲ್ಲಿ ಇಲ್ಲ. ನನ್ನ ತಂದೆ ತಾಯಿ ಅಣ್ಣ ತಮ್ಮಂದಿರದ್ದು ಆಧಾರ ಗುರುತಿನ ಚೀಟಿ, ರೇಷನ್ ಕಾರ್ಡು ಹೊಸೂರಿನಲ್ಲಿ ಇದೆ. ಹೊಸೂರು ಗ್ರಾಮದಲ್ಲಿರುವ ನನ್ನ ತಂದೆ ಹೆಸರು ತುರಾರಯ್ಯ, ತಾಯಿ ಮಲ್ಲಮ್ಮ. ನನ್ನನ್ನು ಸಾಕುಮಗನಾಗಿ ಕರೆದುಕೊಂಡು ಬಂದರು ಎನ್ನುವ ದಾಖಲೆ ಆಗಿರುವ ಬಗ್ಗೆ ನನಗೆ ಗೊತ್ತಿಲ್ಲ. ಆ ರೀತಿ ಇದ್ದರೆ ನ್ಯಾಯಾಲಯಕ್ಕೆ ದಾಖಲೆ ಕೊಡಬಹುದು. ನನ್ನನ್ನು ಚಿಕ್ಕಮಾದಯ್ಯ ಮತ್ತು ಮಣಿಯಮ್ಮ ಇಬ್ಬರು ಮಾತ್ರ ಕರೆದುಕೊಂಡು ಹೋಗಲು ಬಂದರು. ಬೇರೆ ಯಾರು ಬಂದಿರಲಿಲ್ಲ. ನಾನು ಸಾಕು ಮಗ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಿಕ್ಕಮಾದಯ್ಯ ಮತ್ತು ಮಣಿಯಮ್ಮ ನನ್ನ ರಕ್ತ ಸಂಬಂದಿಗಳು.

ಕೆಲ್ಲಯ್ಯರವರಿಗೆ ಇಬ್ಬರು ಹೆಂಡತಿಯರು. ಕೆಲ್ಲಯ್ಯನ ಆಸ್ತಿಗಳು ಮಣಿಯಯ್ಯ, ಕೆ ಬಸವರಾಜು, ದ್ಯಾವಯ್ಯ, ಚಿಕ್ಕಮರಯ್ಯ, ಮಣಿಯಯ್ಯ, ಪುಟ್ಟ ಮಾದಯ್ಯ ಕೆ, ಚಿಕ್ಕ ಬಸವಯ್ಯ, ಶಿವಸ್ವಾಮಿ ರವರ ನಡುವೆ ಭಾಗವಾಯಿತು. ಈ 8 ಮಂದಿ ತಾಯಿಯ ಹೆಸರು ಚಿಕ್ಕಮ್ಮ. ಮೊದಲ ಹೆಂಡತಿ ದೇವಮ್ಮನಿಗೆ ದೇವರ ಗುಡ್ಡ ಮಾದಯ್ಯ ಎನ್ನುವ ಒಬ್ಬನೇ ಮಗ. ಭಾಗವಾದ ಸಮಯದಲ್ಲಿ ನನಗೆ ಎಷ್ಟು ವಯಸ್ಸು ಎಂದು ಗೊತ್ತಿಲ್ಲ. ಆಸ್ತಿ ಭಾಗವಾದ ನಂತರ ನನ್ನನ್ನು ಕರೆದುಕೊಂಡು ಬಂದರು. ಭಾಗ ಮಾಡಲು ಪಂಚಾಯಿತಿಗೆ ಸಿದ್ದಯ್ಯ, ಭೀಮಯ್ಯ ಸೇರಿದ್ದರು. ಅವರು ಮೃತರಾಗಿರುತ್ತಾರೆ. ಕೆಲ್ಲಯ್ಯ ಮತ್ತು ಅವರ ಮಕ್ಕಳು ಭಾಗ ಆಗಿಲ್ಲ ಎಂದರೆ ಸರಿಯಲ್ಲ. ಭಾಗವಾಗದ ಕಾರಣ ಚಿಕ್ಕಮಾದಯ್ಯನಿಗೆ ವಿಲ್ ಬರೆಯುವ ಹಕ್ಕು ಇರಲಿಲ್ಲ ಎಂದರೆ ಸರಿಯಲ್ಲ. ಭಾಗವಾಗದಿದ್ದರೂ ಸಹ ಆಸ್ತಿ ಕಬಳಿಸುವ ಉದ್ದೇಶದಿಂದ ವಿಲ್ ನಾಮೆ ಆಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಹೇಳುತ್ತಿದದೇನ ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೇಳಿದ್ದು, ಸಮಯ ನೀಡಲಾಯಿತು.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ., ನಂಜನಗೂಡು.